ರಾಜ್ಯದ ಪ್ರವಾಸಿ ಪ್ರೇಕ್ಷಣೆಯ ಸ್ಥಳಗಳ ಬಗ್ಗೆ.

2175 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ಜಿಲ್ಲೆಗಳು ಪ್ರವಾಸೋದ್ಯಮ ಮಹತ್ವ ಪಡೆದು ಕೊಂಡಿರುವುದು? ಅವು ಯಾವುವು?*

ಆ) *ಈ ಪ್ರತಿಯೊಂದು ಜಿಲ್ಲೆಗಳಿಗೆ ದೇಶ ಹಾಗೂ ವಿದೇಶಗಳಿಂದ ಬರುವ ಪ್ರವಾಸಿಗರ ಸಂಖ್ಯೆ ಎಷ್ಟು?*

ಇ) *ಈ ಪ್ರತಿಯೊಂದು ಜಿಲ್ಲೆಗೆ ಪ್ರವಾಸಿಗರನ್ನು ಆಕರ್ಷಿಸಲು ಮಾಡುವ ವೆಚ್ಚವೆಷ್ಟು? ಜಿಲ್ಲಾವಾರು ವಿವರ ಒದಗಿಸುವುದು?*

ಈ) *ಬಿಜಾಪುರ ಜಿಲ್ಲೆ ಇಡೀ ದೇಶದಲ್ಲಿಯೇ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಮಹತ್ವದ ಸ್ಥಾನವನ್ನು ಹೊಂದಿದ್ದು ಅಲ್ಲಿ ಇದೂವರೆಗೂ ಯಾವುದೇ ಉತ್ತಮ ರೀತಿಯಲ್ಲಿ ಯಾವುದೇ ಸರಿಯಾದ ಸೌಕರ್ಯಗಳನ್ನು ಮಾಡದೇ ಇರಲು ಕಾರಣಗಳೇನು?*

ಉ) *ಸರಿಯಾದ ಸೌಕರ್ಯಗಳನ್ನು ಒದಗಿಸುವ ಉದ್ದೇಶ ಸರ್ಕಾರಕ್ಕಿದ್ದಲ್ಲಿ ಯಾವಾಗ ಆ ಸೌಕರ್ಯಗಳನ್ನು ಒದಗಿಸುವುದು? (ಸೌಕರ್ಯಗಳ ವಿವರವಾದ ಮಾಹಿತಿ ಕೊಡುವುದು).*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದ ಒಟ್ಟು 20 ಜಿಲ್ಲೆಗಳು ಪ್ರವಾಸೋದ್ಯಮ ಮಹತ್ವ ಪಡೆದ ಜಿಲ್ಲೆಗಳಾಗಿರುತ್ತದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಪ್ರವಾಸಿಗರ ದೃಷ್ಟಿಯಿಂದ ಕರ್ನಾಟಕವನ್ನು 5 ವೃತ್ತಗಳ ಬಗ್ಗೆ ಬಣ್ಣದ ಮಡಿಕೆಗಳು ವಿಡಿಯೋ ಚಿತ್ರಗಳನ್ನು ತಯಾರಿಸಿ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಸಮಾವೇಶಗಳಲ್ಲಿ ಭಾಗವಹಿಸುವ ಮೂಲಕ ಮಡಿಕೆಗಳ ವಿತರಣೆ, ವಿಡಿಯೋ ಪ್ರದರ್ಶನಗಳನ್ನು ಏರ್ಪಡಿಸಿ ಪ್ರವಾಸಿಗರನ್ನು ಆಕರ್ಷಿಸಲಾಗುವುದು. ಇದಕ್ಕಾಗಿ ಕಳೆದ ಸಾಲಿನಲ್ಲಿ ಇಲಾಖೆಯು ಪ್ರಚಾರಕ್ಕಾಗಿ ಒಟ್ಟು ರೂ. 84.00 ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ. ಪ್ರವಾಸಿ ವೃತ್ತಗಳು ವಿವಿಧ ಜಿಲ್ಲೆಯಲ್ಲಿ ಬರುವುದರಿಂದ ಮತ್ತು ಇಲಾಖೆಯ ಪ್ರಚಾರ ಪ್ರವಾಸಿ ವೃತ್ತದ ಆಧಾರದ ಮೇಲೆ ಮಾಡುವುದರಿಂದ ಜಿಲ್ಲಾವಾರು ವೆಚ್ಚವನ್ನು ನೀಡಲು ಸಾಧ್ಯವಾಗುವುದಿಲ್ಲ.

ಈ) 1) ಬಿಜಾಪುರದಲ್ಲಿ ಸಹಾಯಕ ನಿರ್ದೇಶಕರಿಂದ ಕೂಡಿದ ಪೂರ್ಣ ಪ್ರಮಾಣದ ಪ್ರವಾಸಿ ಮಾಹಿತಿ ಕೇಂದ್ರ ಕೆಲಸ ನಿರ್ವಹಿಸುತ್ತಿದೆ. ಪ್ರವಾಸಿ ಆಕರ್ಷಣೆ ದೃಷ್ಟಿಯಿಂದ ಬಿಜಾಪುರವನ್ನು ಉತ್ತರ ವೃತ್ತದಲ್ಲಿ ಸೇರಿಸಿ ಬಣ್ಣದ ಮಡಿಕೆಯನ್ನು ಹೊರತರಲಾಗಿದೆ. ಪ್ರಸಿದ ಗೊಳಗುಮ್ಮಟಕ್ಕೆ ಹೊನಲು ಬೆಳಕನ್ನು ರೂ. 15.38 ಲಕ್ಷ ವೆಚ್ಚದಲ್ಲಿ ಅಳವಡಿಸಲಾಗಿದೆ. ಕೇಂದ್ರ ಧನ ಸಹಾಯದಿಂದ ನರಸಪುರ ಉತ್ಸವ ಹಾಗೂ ಪಟ್ಟದಕಲ್ಲು ಉತ್ಸವವನ್ನು ಪ್ರತೀ ವರ್ಷ

ಆಚರಿಸಲಾಗುತ್ತಿದೆ. ಆದ್ದರಿಂದ ಪ್ರವಾಸಿ ಆಕರ್ಷಣೆಗೆ ಸರಿಯಾದ ಸೌಕರ್ಯ ಮಾಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

2. ಬಿಜಾಪುರದಲ್ಲಿ ಪ್ರವಾಸಿಗರ ಅನುಕೂಲತೆಗೋಸ್ಕರ ಸುಲಭ ಶೌಚಾಲಯವನ್ನು ರೂ. 5.00 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ.

3. ಬಿಜಾಪುರದಲ್ಲಿ 17 ಲಕ್ಷ ವೆಚ್ಚದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

4. 1995-96ನೇ ಸಾಲಿನಲ್ಲಿ ಬಿಜಾಪುರದಲ್ಲಿ ಸುಮಾರು 40.00 ಲಕ್ಷ ವೆಚ್ಚದಲ್ಲಿ 'ಯಾತ್ರಿ ನಿವಾಸ ನಿರ್ಮಿಸಲು ಕೇಂದ್ರ ಸರ್ಕಾರ ತಾತ್ಕಿಕವಾಗಿ ಒಪ್ಪಿಗೆ ನೀಡಿದೆ.

ಊ) ಉದ್ಭವಿಸುವುದಿಲ್ಲ.

ಕರ್ನಾಟಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ

ವರ್ಷ 1994-95

ಜಿಲ್ಲೆಗಳು	*ದೇಶಿಯರು*	*ವಿದೇಶಿಯರು*	*ಒಟ್ಟು*
ಮೈಸೂರು	24,99,635	13,960	25,13,595
ಕೊಡಗು	28,360	1,210	29,570
ತುಮಕೂರು	15,168	30	15,198
ಚಿತ್ರದುರ್ಗ	59,718	27	69,745
ಹಾಸನ	39,63,760	29,970	39,93,730
ಶಿವಮೊಗ್ಗ	3,69,340	2,960	3,72,300
ದಕ್ಷಿಣ ಕನ್ನಡ	5,79,792	1,763	5,81,555
ಉತ್ತರ ಕನ್ನಡ	19,900	1,314	21,214
ಬಳ್ಳಾರಿ	3,76,700	7,000	3,83,700
ರಾಯಚೂರು	29,867	46	29,913
ಬಿಜಾಪುರ	3,61,390	8,730	3,70,120
ಒಟ್ಟು	**83,13,630**	**67,010**	

ಏಪ್ರಿಲ್ 1995 ರಿಂದ ಆಗಸ್ಟ್ 1995

ಜಿಲ್ಲೆಗಳು	ದೇಶಿಯರು	ವಿದೇಶಿಯರು	ಒಟ್ಟು
ಮೈಸೂರು	20,39,289	2,249	20,41,538
ಕೊಡಗು	3,505	257	1,597
ತುಮಕೂರು	1,593	04	1,597
ಚಿತ್ರದುರ್ಗ	19,454	04	19,458
ಹಾಸನ	3,67,716	9,951	3,77,667
ಶಿವಮೊಗ್ಗ	1,62,608	556	1,63,164
ದಕ್ಷಿಣ ಕನ್ನಡ	1,13,112	394	1,13,508
ಬಳ್ಳಾರಿ	30,736	603	31,339
ರಾಯಚೂರು	23,814	-	23,814
ಬಿಜಾಪುರ	52,650	2,490	55,140
ಒಟ್ಟು	**28,14,477**	**16,508**	

ಬಿಜಾಪುರ ಜಿಲ್ಲೆಯಲ್ಲಿ ನದಿಗಳ ಅಡ್ಡಲಾಗಿ ಕಟ್ಟಿರುವ ಸೇತುವೆಗಳ ಮುಳುಗಡೆ.

2177 - ಶ್ರೀ ಜೆ.ಟಿ. ಪಟೇಲ್ (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಲಮಟ್ಟಿ ಯೋಜನೆಯಲ್ಲಿ ಬಿಜಾಪುರ ಜಿಲ್ಲೆಯ ಗಲಗಲಿ ಹಾಗೂ ಚಿಕ್ಕಪಡಸಲಗಿ ಹತ್ತಿರ ಕೃಷ್ಣ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಗಳು ಮುಳುಗಡೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆಲಮಟ್ಟಿ ಜಲಾಶಯದ ಎತ್ತರ ಮೊದಲು 521 ಮೀಟರ್ ಇದ್ದದ್ದು ಈಗ 521.24 ಮೀಟರಗೆ ಎತ್ತರಿಸಲು ತೀರ್ಮಾನಿಸಿರುವುದರಿಂದ ಈ ಎರಡೂ ಸೇತುವೆಗಳು ಮುಳುಗಡೆಯಾದರೆ ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ಜನರಿಗೆ ಆಗುವ ಅನಾನುಕೂಲತೆಯನ್ನು ಯಾವ ರೀತಿಯಲ್ಲಿ ನಿವಾರಿಸಲಾಗುವುದು?*

ಇ) *ಈ ವಿಷಯದಲ್ಲಿ ಸರ್ಕಾರದ ನಿಲುವೇನು?*

ಈ) *ಈ ದೆಸೆಯಲ್ಲಿ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :